

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING BAGALKOT

Volume : 08 Issue : 43 Tuesday 21-10-2025 E-mail : maruti.b.hosamani76@gmail.com Page: 4 Price : Rs. 1/-


## ಮನಸ್ಸಿನ ಸಮತೋಲನ ಕಾಪಾಡಿ ಕೊಳ್ಳಿ, ಸಂತೋಷದಿಂದ ಬದುಕಿ – ನ್ಯಾಯಾಧೀಶರ ಸಂದೇಶ

**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ರಾಯಚೂರು) ಜಿಲ್ಲಾ ಆರೋಗ್ಯ ಸಂಘ (ಮಾನಸಿಕ ಆರೋಗ್ಯ ವಿಭಾಗ) ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಭಾರತೀಯ ಮನೋ ವೈದ್ಯಕೀಯ ಸಂಘ (ಕರ್ನಾಟಕ ಶಾಖೆ) ಸಾರ್ವಜನಿಕ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಅರಕ್ಷಕ/ ಕಾರಾಗೃಹ ಇಲಾಖೆ, ಅಬಕಾರಿ ಇಲಾಖೆ, ಮನೋ ರೋಗ ವಿಭಾಗ ರಿಮ್ಸ್ ರಾಯಚೂರು ಹಾಗೂ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ನೆರವೇರಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಶಿವರಾಜ ವಿ. ಸಿದ್ದೇಶ್ವರ ನೆರವೇರಿಸಿ ಮಾತನಾಡಿ ? "ಖಂಣಟಿಜ ಟುಟಿಜ ು ಚಿ, ಂಣಟಿಜ ಛಿಂಜಥಿ", ಅಂದರೆ ದೇಹ ಆರೋಗ್ಯವಾಗಿರಲು ಮನಸ್ಸು ಆರೋಗ್ಯವಾಗಿರ ಬೇಕು ಎಂದು ಹೇಳಿದರು. ಮಾನಸಿಕ ಆರೈಕೆ ಜೀವನದ ಅತ್ಯಂತ ಮುಖ್ಯ ಭಾಗವಾಗಿದೆ. ಸಿಟ್ಟು, ಕೋಪ, ಆತಂಕ, ಸರಿಯಾದ ಸಮಯಕ್ಕೆ ನಿದ್ದೆ ಮತ್ತು ಊಟದ ಕೊರತೆ ಇವು ಮಾನಸಿಕ ಅಸ್ವಸ್ಥತೆಗೆ ಕಾರಣವಾಗುತ್ತವೆ. ಪ್ರತಿದಿನ ಧ್ಯಾನ, ವ್ಯಾಯಾಮ, ಸಂಭಾಷಣೆ ಮತ್ತು ಹಿತಕರ ಚಿಂತನೆಗಳ ಮೂಲಕ ಮನಸ್ಸಿನ ಸಮತೋಲನ ಕಾಪಾಡಿ ಕೊಳ್ಳುವುದು ಅಗತ್ಯ ಎಂದರು.




ಕಾರ್ಯಕ್ರಮದಲ್ಲಿ ಮಾನಸಿಕ ಆರೋಗ್ಯ ತಜ್ಞ ಮನೋಹರ ಪತ್ತಾರ ಅವರು ವಿಶ್ವ ಮಾನಸಿಕ ಆರೋಗ್ಯ ದಿನದ ಮಹತ್ವದ ಕುರಿತು ಉಪನ್ಯಾಸ ನೀಡಿದರು. ಅವರು ಮಾನಸಿಕ ಅಸ್ವಸ್ಥತೆಗಳನ್ನು ಗುರುತಿಸುವುದು, ಅದನ್ನು ನಿರ್ಲಕ್ಷಿಸದೆ ಸಲಹೆಗಾರರ ನೆರವನ್ನು ಪಡೆಯುವುದು ಹಾಗೂ ಕುಟುಂಬದ ಬೆಂಬಲದ ಅಗತ್ಯತೆಯ ಕುರಿತು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಭಾರಿ ತಾಲೂಕು ವೈದ್ಯಾಧಿಕಾರಿ ಡಾ, ಶರಣಬಸವ ವಹಿಸಿದ್ದರು.

ಹಿರಿಯ ನ್ಯಾಯವಾದಿಗಳಾದ ಗುಮ್ಮ ಬಸವರಾಜ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಆನಂದ.ಹೆಚ್ ಕೊಣ್ಣೂರು, ನ್ಯಾಯವಾದಿಗಳ ಸಂಘ ಅಧ್ಯಕ್ಷ ರವಿಕುಮಾರ ಪಾಟೀಲ್, ಖಜಾಂಚಿ ದತ್ತಾತ್ರೇಯ ಹಿರೇಕೊಟ್ಟೆಕಲ್, ಜಂಟಿ ಕಾರ್ಯದರ್ಶಿ ಮಲ್ಲೇಶ ಮಾಚನೂರು, ಕರ್ನಾಟಕ ರಾಜ್ಯ ವಿಕಲ ಚೇತನರ ರಾಜ್ಯ ಸಂಘಟನಾ ಕಾರ್ಯದರ್ಶಿ ದೇಸಾಯಿ ದೋತರಬಂಡಿ, ಸಂಕಲ್ಪ ವಿಕಲ ಚೇತನರ ಸಂಘ ಅಧ್ಯಕ್ಷ ಶಿವಕುಮಾರ್ ಚಲ್ಮಲ್ ಸೇರಿದಂತೆ ವಿದ್ಯಾರ್ಥಿಗಳು, ವೈದ್ಯಾಧಿಕಾರಿಗಳು, ನರ್ಸಿಂಗ್ ಸಿಬ್ಬಂದಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡು ಮಾನಸಿಕ ಆರೋಗ್ಯದ ಕುರಿತು ಅರಿವು ಮೂಡಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಪೌರ ಕಾರ್ಮಿಕ ಅನಾಥ ಹುಡುಗನಿಗೆ ಕೆಲಸ ಕೊಡಿಸಿದ – ಶಾಸಕ ಜಿ.ಟಿ ದೇವೇಗೌಡರು

**ಸಿಹಿ ಕಹಿ ಸುದ್ದಿ,**

**ಮೈಸೂರು :** ಮೈಸೂರಿನ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರಕ್ಕೆ ಒಳಪಡುವ ಶ್ರೀರಾಂಪುರ ವಾಸಿಯಾದ ಪರಿಶಿಷ್ಟ ಪೌರ ಕಾರ್ಮಿಕ ಅನಾಥ ಹುಡುಗ ಕುಮಾರಸ್ವಾಮಿಗೆ (21 ವರ್ಷ) ಶ್ರೀರಾಂಪುರ ಪಟ್ಟಣ ಪಂಚಾಯ್ತಿಯಲ್ಲಿ ಶಾಸಕ ಜಿ.ಟಿ ದೇವೇಗೌಡರು ಕೆಲಸವನ್ನು ಕೊಡಿಸಿ ಅನಾಥನ ಬಾಳಿಗೆ ಬೆಳಕಾದರು.

ದಿನಾಂಕ–19–10–2025 ರ ಭಾನುವಾ ರಂದು ಮೈಸೂರು ಜಿಲ್ಲಾ ಡಿ.ಎಸ್.ಎಸ್ ದ ನಿಂಗರಾಜ್ ಮಲ್ಲಾಡಿ, ಕೆ.ನಂಜಪ್ಪ ಬಸವನಗುಡಿ, ಅಲೆಮಾರಿ ಸಂಘದ ವೈ.ಕುಮಾರ ಏಕಲವ್ಯ ನಗರ ಮುಂತಾದವರು ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಜಿ.ಟಿ ದೇವೇಗೌಡ ರವರ ನಿವಾಸದಲ್ಲಿ ಭೇಟಿಯಾದ ಸಂದರ್ಭದಲ್ಲಿ ನಿಂಗರಾಜ್ ಮಲ್ಲಾಡಿ ರವರು ಮಾತನಾಡಿ ಶ್ರೀರಾಂಪುರದ ಪರಿಶಿಷ್ಟ ಪೌರ ಕಾರ್ಮಿಕ ಕುಮಾರಸ್ವಾಮಿ ಎಂಬ ಹುಡುಗ ತನ್ನ ತಂದೆ ತಾಯಿಯನ್ನು ಸ್ವಲ್ಪ ದಿನದ ಹಿಂದೆ ಕಳೆದು ಕೊಂಡು ಅನಾಥವಾಗಿ ಕೆಲಸವೂ ಇಲ್ಲದೆ ತುಂಬಾ ಸಂಕಷ್ಟದಲ್ಲಿ ಅನಾಥ ಪ್ರಜ್ಞೆಯಿಂದ ಬಳಲುತ್ತಾ ತುಂಬಾ ನೋವಿನಲ್ಲಿ ಕುಮಾರಸ್ವಾಮಿಗೆ ಇದ್ದು, ಈತನಿಗೆ ಶ್ರೀರಾಂಪುರ ಪಟ್ಟಣ ಪಂಚಾಯ್ತಿಯಲ್ಲಿ ಸ್ವಚ್ಛತಾ ಕಾರ್ಮಿಕನಾಗಿ ನೇಮಕ ಮಾಡಿಸಿ ಕೊಟ್ಟು ಈತನ ಸಂಕಷ್ಟದ ಜೀವನಕ್ಕೆ ನೆರವಾಗಬೇಕೆಂದು ಮನವಿ ಮಾಡಿದರು.

ಕೂಡಲೇ ಶಾಸಕರಾದ ಜಿ.ಟಿ ದೇವೇಗೌಡ ರವರು ಶ್ರೀರಾಂಪುರ ಪಟ್ಟಣ ಪಂಚಾಯ್ತಿಯ ಮುಖ್ಯಾಧಿಕಾರಿ ಸುರೇಶ್ ರವರಿಗೆ ದೂರವಾಣಿ ಮೂಲಕ ಕರೆ ಮಾಡಿ ಕುಮಾರಸ್ವಾಮಿ ಎಂಬ ಪೌರ ಕಾರ್ಮಿಕ ಹುಡುಗನಿಗೆ ಶ್ರೀರಾಂಪುರ ಪಟ್ಟಣ ಪಂಚಾಯ್ತಿಯಲ್ಲಿ ಸ್ವಚ್ಛತಾ ಕಾರ್ಮಿಕನಾಗಿ ನೇಮಕ ಮಾಡಿ ಕೊಳ್ಳುವಂತೆ ತಿಳಿಸಿದರು. ಜಿ.ಟಿ ದೇವೇಗೌಡರ ಸೂಚನೆಗೆ ಮುಖ್ಯಾಧಿಕಾರಿ ಸುರೇಶ್ ರವರು ಸ್ಪಂದಿಸಿ ಕುಮಾರಸ್ವಾಮಿ ಎಂಬ ಹುಡುಗನನ್ನು ಕಳುಹಿಸಿ ಕೊಡಿ ಸರ್. ನಾನು ಕೆಲಸಕ್ಕೆ ನೇಮಿಸಿ ಕೊಳ್ಳುತ್ತೇನೆಂದು ತಿಳಿಸಿದರು. ಜಿ.ಟಿ ದೇವೇಗೌಡ ರವರು ಹುಣಸೂರು ಶಾಸಕ ರಾದಾಗಲಿಂದಲೂ ಇಂದಿನವರೆಗೂ ದಲಿತರು, ಪೌರ ಕಾರ್ಮಿಕರು, ನಿರ್ಗತಿಕ ಅಲೆಮಾರಿ ಸಮುದಾಯಗಳು, ದಿಕ್ಕು ದನಿಯಿಲ್ಲದ ಅನಾಥ ಸಮುದಾಯಗಳ ಬಗ್ಗೆ ಅಪಾರವಾದ ಪ್ರೀತಿ, ಕರುಣೆ, ಸಹಾನುಭೂತಿಯನ್ನು ಹೊಂದಿರುವ ನಾಯಕರಾಗಿದ್ದಾರೆ. ದಲಿತರನ್ನು ಬರಿಕಣ್ಣಿನಿಂದ ನೋಡದೇ ಹೃದಯಾಂತರಾಳ ದಿಂದ ನೋಡಿ ಅವರ ನೋವು ದುಃಖ ದುಮ್ಮಾನಗಳಿಗೆ ಸ್ಪಂದಿಸುವ ನಾಯಕರಾಗಿದ್ದಾರೆ. ಇಂತಹ ನಾಯಕರು ರಾಜಕಾರಣದಲ್ಲಿ ಮತ್ತು ಸಮಾಜದಲ್ಲಿ ಅಪರೂಪದಲ್ಲಿ ಅಪರೂಪ ಎಂದೇ ಹೇಳಬಹುದು. ತಂದೆ ತಾಯಿಯನ್ನು ಕಳೆದುಕೊಂಡು ಅನಾಥವಾಗಿದ್ದ ಪೌರ ಕಾರ್ಮಿಕ ಕುಮಾರಸ್ವಾಮಿ ಎಂಬ ಹುಡುಗನ ನೋವನ್ನು ತಿಳಿದು ಕೊಂಡು ಶ್ರೀರಾಂಪುರ ಪಟ್ಟಣ ಪಂಚಾಯ್ತಿಯಲ್ಲಿ ಕೆಲಸ ಕೊಡಿಸಿ ಆತನ ಬಾಳಿಗೆ ಬೆಳಕು ನೀಡಿದ್ದಾರೆ. ಜಿ.ಟಿ ದೇವೇಗೌಡರಿಗೆ ಮೈಸೂರು ಜಿಲ್ಲಾ ಡಿ.ಎಸ್.ಎಸ್ ಪೌರ ಕಾರ್ಮಿಕ ಸಂಘ, ಅಲೆಮಾರಿ ಸಂಘ ತುಂಬು ಹೃದಯದ ಅಭಿನಂದನೆಯನ್ನು ಸಲ್ಲಿಸುತ್ತದೆ.



ಈ ಸಂದರ್ಭದಲ್ಲಿ ಜಿಲ್ಲಾ ಸಫಾಯಿ ಕರ್ಮಚಾರಿ ಜಾಗೃತಿ ಸಮಿತಿಯ ಸದಸ್ಯರಾದ ಕೆ.ನಂಜಪ್ಪ ಬಸವನಗುಡಿ, ಅಲೆಮಾರಿ ಸಂಘದ ಅಧ್ಯಕ್ಷರಾದ ವೈ ಕುಮಾರ, ಉದ್ಯೋಗದ ಫಲಾನುಭವಿಯಾದ ಕುಮಾರಸ್ವಾಮಿ ಹಾಜರಿದ್ದರು.

ನೋವು ಮತ್ತು ಆತಂಕದ ಛಾಯೆ ಹೊಂದಿದ್ದ ಪೌರಕಾರ್ಮಿಕ ಕುಮಾರಸ್ವಾಮಿಯ ಮುಖದಲ್ಲಿ ಜಿ.ಟಿ ದೇವೇಗೌಡರ ಸಹಕಾರ ದಿಂದ ಆತ್ಮಬಲ ಬಂದು ಮುಖದಲ್ಲಿ ಮಂದಹಾಸ ಬೀರುತ್ತಿತ್ತು ಎಂದು ವರದಿಯಾಗಿದೆ.










# ಮುಖ್ಯ ನ್ಯಾಯಾಧೀಶರ ಮೇಲಿನ ಹಲ್ಲೆ ಕ್ಷಮಿಸಲು ಸಾಧ್ಯವಿಲ್ಲ




**ಜಮಖಂಡಿ :** ನಗರದ ಎ. ಜಿ. ದೇಸಾಯಿ ವೃತ್ತದಲ್ಲಿ ಇತ್ತೀಚೆಗೆಸುಪ್ರೀಮ್‌ಕೋರ್ಟಿನಮುಖ್ಯನ್ಯಾಯಾಧೀಶ ಬಿ. ಆರ್. ಗವಾಯಿ ಅವರ ಮೇಲೆ ಹಲ್ಲೆ ಎಸಗಿದ ಆರೋಪಿಯನ್ನು ಬಂಧಿಸಿ ಗಡಿಪಾರು ಮಾಡುವ ಮೂಲಕಸಂವಿಧಾನದರಕ್ಷಣೆಮಾಡುವಂತೆಸ್ಥಳೀಯ ಕಾನೂನು ವಿದ್ಯಾರ್ಥಿಗಳ ಒಕ್ಕೂಟದಿಂದ ತಹಶೀಲ್ದಾರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.
ಸುಪ್ರೀಮ್ ಕೋರ್ಟಿನಲ್ಲಿ ನಡೆದ ಘಟನೆ ನ್ಯಾಯಾಂಗದ ಇತಿಹಾಸದಲ್ಲಿ ಕಪ್ಪುಚುಕ್ಕೆಯಾಗಿದೆ. ದೇಶದ ಪ್ರಧಾನ ನ್ಯಾಯಮೂರ್ತಿ ಬಿ. ಆರ್. ಗವಾಯಿ ಅವರ ಮೇಲಿನ ಶೂ ದಾಳಿ ಕೇವಲ ಒಬ್ಬ ವ್ಯಕ್ತಿಯ ಮೇಲಿನ ಕೃತ್ಯವಲ್ಲ; ಅದು ನ್ಯಾಯಾಂಗದ ಮೇಲಿನ ದಾಳಿಯಾಗಿದೆ. ಪ್ರಜಾಪ್ರಭುತ್ವದ ಆತ್ಮದ ಮೇಲಿನ ನೇರ ಹಲ್ಲೆಯಾಗಿದೆ. ವಕೀಲ ವೃತ್ತಿಯಲ್ಲಿರುವ ಕಿಶೋರ್ ಎಂಬಾತನಿಂದ ಕೃತ್ಯ ನಡೆದಿದ್ದು ಅತ್ಯಂತ ವಿಷಾದನೀಯ. ನ್ಯಾಯಾಲಯದ ಗೌರವ ಕಾಪಾಡಬೇಕಾದ ವಕೀಲನಿಂದಲೆ ನ್ಯಾಯಪೀಠದ ಮೇಲೆ ದಾಳಿ ನಡೆದಿರುವುದು ವೃತ್ತಿ ನೀತಿಯ ಕುಸಿತದ ಸಂಕೇತವಾಗಿದೆ. ಗಂಭೀರ ಘಟನೆ ಬಳಿಕವೂ ಸಂಬಂಧಪಟ್ಟ ವ್ಯಕ್ತಿ ಬಂಧನವಾಗದಿರುವುದು ನಮ್ಮೆಲ್ಲರ ಮನಸ್ಸಿಗೆ ನೋವುಂಟುಮಾಡಿದೆ. ಇದು ನ್ಯಾಯಾಂಗದ ಸ್ವಾಯತ್ತತೆ ಮೇಲಿನ ನಂಬಿಕೆಗೆ ಧಕ್ಕೆ ಉಂಟಾಗಿದೆ.
ನ್ಯಾಯಮೂರ್ತಿ ಮೇಲಿನ ದಾಳಿ ಎಂದರೆ ಅದು ನ್ಯಾಯದ ದೇವಾಲಯದ ಮೇಲಿನ ದಾಳಿ. ನ್ಯಾಯಾಲಯದ ಪಾವಿತ್ರ್ಯತೆಯನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ನೈತಿಕ ಕರ್ತವ್ಯವಾಗಿದೆ.
ವಕೀಲ ಕಿಶೋರ್ ಅವರನ್ನು ತಕ್ಷಣ ಬಂಧಿಸಿ ಗಡಿಪಾರು ಮಾಡಬೇಕು. ಅವನ ಪರವಾಗಿ ಸಮರ್ಥನೆ ಮಾಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಇಂತಹ ಕೃತ್ಯಗಳು ಪುನರಾವರ್ತನೆಯಾಗದಂತೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಸಂವಿಧಾನದ ಗೌರವ ಕಾಪಾಡುವುದು ರಾಷ್ಟ್ರದ ಗೌರವ ಕಾಪಾಡಿದಂತೆ. ನ್ಯಾಯದ ಬಲವೇ ಪ್ರಜಾಪ್ರಭುತ್ವದ ಶಕ್ತಿಯನ್ನು ದುರ್ಬಲಗೊಳಿಸುವ ಯಾವುದೇ ಕೃತ್ಯ ಕಾನೂನಿನ ಖಡ್ಗದಿಂದ ಕತ್ತರಿಸಬೇಕೆಂದು ರಾಷ್ಟ್ರಪತಿಗಳಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

# ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನೆ



**ಜಮಖಂಡಿ :** ನಗರದ ಬಿ.ಎಲ್.ಡಿ.ಇ. ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸನ್ 2024–25 ನೇ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ ಸಮಾರಂಭ ನಡೆಯಿತು. ಬಿ.ಎಲ್.ಡಿ.ಇ. ಕಾನೂನು ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ನಿಖಿಲ ಮಂಟೂರ ಉದ್ಘಾಟಿಸಿದರು. ಉಪ ಪ್ರಾಚಾರ್ಯ ಪ್ರೊ. ಕೆ. ಜೆ. ಜೀರಗಾಳಿ ಅಧ್ಯಕ್ಷತೆ ವಹಿಸಿದ್ದರು.
ವೇದಿಕೆಯಲ್ಲಿ ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷ ಪ್ರೊ. ಪ್ರೇಮಾನಂದ ಹಿರೇಮಠ, ಪ್ರೊ. ಎಲ್. ಎಂ. ಮಾರ್ಕಪನಳ್ಳಿ, ಪ್ರೊ. ಅಶ್ವಿನಿ ಅನಂತಪೂರ, ಪ್ರೊ. ಮಹದೇವ ಗಲಬಿ ಸಹಿತ ಇನ್ನೂ ಹಲವರು ಉಪಸ್ಥಿತರಿದ್ದರು.
ಪ್ರಶಿಕ್ಷಣಾರ್ಥಿಗಳಾದ ಸುಷ್ಮಾ ತಂಬಾಕು ಪ್ರಾರ್ಥಿಸಿದರು. ರಾಹುಲ ಬಾವಿಕಟ್ಟಿ ಸ್ವಾಗತಿಸಿದರು. ಮಂಜುನಾಥ ಶಿರಗಾಂವಿ, ಭಾಗ್ಯಶ್ರೀ ಹುಲಕುಂದ ಸೊಗಸಾಗಿ ನಿರೂಪಿಸಿದರು. ವೀಣಾ ಬಿರಾದಾರ ವಂದಿಸಿದರು.

# ಗರ್ಭಿಣಿಯರಿಗೆ ಪೌಷ್ಠಿಕ ಆಹಾರದ ಅವಶ್ಯಕತೆ





**ಬೀಳಗಿ:**ಗರ್ಭಿಣಿಯರಿಗೆಪ್ರೀತಿಯ ಮುಖೇನ ನೆಮ್ಮದಿ ಕೊಡಬೇಕು. ಆಕೆಗೆ ಪೌಷ್ಟಿಕ ಆಹಾರ ನೀಡಬೇಕು.ಹೊಟ್ಟೆಯಲ್ಲಿನಮಗು ಸದೃಢವಾಗಿ ಬೆಳೆಯಬೇಕಾದರೆ ಮೊದಲು ತಾಯಿಯ ಆರೋಗ್ಯ ಸದೃಢವಾಗಿರಬೇಕು. ಪೌಷ್ಟಿಕ ಆಹಾರ ಹಾಗೂ ಉತ್ತಮ ಜೀವನ ಶೈಲಿ ಅಳವಡಿಸಿಕೊಂಡು ಎಲ್ಲ ಗರ್ಭಿಣಿಯರು ಆರೋಗ್ಯಕರ ಮಗುವಿಗೆ ಜನ್ಮ ನೀಡಬೇಕು ಎಂದು ಸಿಡಿಪಿಓ ಬಿ. ಜಿ. ಕವಟೇಕರ ಹೇಳಿದರು.
ತಾಲೂಕಿನ ಅರಕೇರಿ ಗ್ರಾಮದ ಎಚ್‌ಪಿಎಸ್ ಶಾಲೆಯ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆವತಿಯಿಂದಹಮ್ಮಿಕೊಂಡ ರಾಷ್ಟ್ರೀಯ ಪೋಷಣ ಅಭಿಯಾನ ಮಾಸಾಚರಣೆ, ಐಸಿಡಿಎಸ್ ಯೋಜನೆಯ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸ್ವಾಸ್ಥ್ಯಂ ನಾರಿ, ಸಶಕ್ತ ಕುಟುಂಬ ಧ್ಯೇಯವನ್ನಿಟ್ಟುಕೊಂಡು ನಡೆದ ಸೀಮಂತ, ನಾಮಕರಣ, ಹುಟ್ಟುಹಬ್ಬ ಹಾಗೂ ಮಕ್ಕಳಿಗೆ ಅನ್ನಪ್ರಾಶನ, ಅಕ್ಷರಭ್ಯಾಸವನ್ನು ಮಾಡಿಸಲಾಗುತ್ತದೆ ಎಂದರು.
ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಪೌಷ್ಟಿಕ ಆಹಾರ ಮೇಳವನ್ನು ಉದ್ಘಾಟಿಸಿ ಮಾತನಾಡಿ, ಸದೃಢ ಕುಟುಂಬ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಹಿರಿದಾಗಿದೆ. ತಾವು ತಯಾರಿಸುವ ಆಹಾರವೇ ಔಷಧಿಯಾಗಿರಬೇಕು. ಜಂಕ್‌ಫುಡ್‌ಗಳಿಂದ ದೂರವಿದ್ದು ಜಾನಪದ ಶೈಲಿಯ ಆಹಾರಗಳನ್ನು ಹೆಚ್ಚೆಚ್ಚು ತಯಾರಿಸಿ ಸೇವಿಸಬೇಕೆಂದು ಕಿವಿ ಮಾತು ಹೇಳಿದರು.
ನಮ್ಮ ಹಿರಿಯರ ಸಾಂಪ್ರದಾಯಿಕ ಆಹಾರ ಪದ್ಧತಿ ಹಾಗೂ ನಮ್ಮ ಸುತ್ತಮುತ್ತಲ ಬೆಳೆಯುವ ಸೊಪ್ಪು ತರಕಾರಿಗಳು, ಹಣ್ಣು ಹಂಪಲು ಪೋಷಕಾಂಶಗಳ ಆಗರವಾಗಿದೆ. ದಿನನಿತ್ಯದ ಆಹಾರದಲ್ಲಿ ಇವುಗಳನ್ನು ಉಪಯೋಗಿಸುವುದರಿಂದ ನಮಗೆ ಪೌಷ್ಠಿಕಾಂಶಗಳ ಕೊರತೆ ಉಂಟಾಗದು. ಕೇವಲ ಮಕ್ಕಳು, ಮಹಿಳೆಯರಿಗೆ ಮಾತ್ರವಲ್ಲ ಪುರುಷರಿಗೂ ಕೂಡ ಪೌಷ್ಟಿಕಾಂಶವುಳ್ಳ ಆಹಾರ ಅಗತ್ಯವಾಗಿದೆ.
ಗರ್ಭಿಣಿಯರು ಟಿ.ವಿ., ಮೋಬೈಲ್‌ಗಳಿಂದದೂರವಿರಬೇಕು ಎಂದರು.
ಕುಂದರಗಿ ಬಿ ವಲಯದಲ್ಲಿ ಬರುವ ಅರಕೇರಿ, ಚಿಕ್ಕಾಲಗುಂಡಿ, ಕೊಪ್ಪ (ಎಸ್.ಕೆ.), ಕಾತರಕಿ, ಲಿಂಗಾಪೂರ(ಎಸ್.ಕೆ.),ಶಿರಗುಪ್ಪಿ, ದುರ್ಗಾಪೂರದ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕರು, ಶಿಶು ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಸಮ್ಮಿಳಿತಗೊಂಡು ಹಮ್ಮಿಕೊಂಡ ಕಾರ್ಯಕ್ರಮ ಅರ್ಥಪೂರ್ಣವಾಗಿ ಜರುಗಿತು.
ಗ್ರಾಮ ಪಂಚಾಯತ್ ಅಧ್ಯಕ್ಷೆ ಮಹಾದೇವಿ ಕಮ್ಮನ್ನವರ, ಲಕ್ಷ್ಮಿ ಪೂಜಾರಿ, ವಿಠ್ಠಲ ನಡಗೇರಿ, ಭರಮಪ್ಪ ಬಿಸನಾಳ, ರಂಗವ್ವ ಮಲ್ಲಾರ, ಕಾಶವ್ವ ಆಗೋಜಿ, ಪಿಡಿಓ ಜಿ. ಎಸ್. ಅಳ್ಳಿಕಟ್ಟಿ, ಶಿವಾನಂದ ಕುಂದರಗಿ, ಬಿ. ಎಸ್. ಭೂಷಣ್ಣವರ, ಗಿರಿಜಾ ಚಿಗರಿ, ಸುಜಾತಾ ರಜಪೂತ, ಗೀತಾ ನಾಯ್ಕರ, ಮಂಜುಳಾ ಇದ್ದಲಗಿ, ಸುಶೀಲಾ ಹಂಚಿನಾಳ, ಶಶಿಕಲಾ ಲಮಾಣಿ, ಚಂದ್ರಕಲಾ ಚನ್ನಾಳ, ರೇಣುಕಾ ಹೆರಕಲ್, ಈರಮ್ಮ ಮಿರ್ಜಿ, ಶೋಭಾ ಸೊಣ್ಣದ, ಮೇಘಾ ಬೂದಿ, ಯಶೋಧಾ ನಡಗೇರಿ, ಜಯಶ್ರೀ ಮುರನಾಳ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

# ಬ್ರಾಹ್ಮಣರು ಜಾತಿವಾದಿಗಳಲ್ಲ: ಜಯಸಿಂಹ





**ಜಮಖಂಡಿ :** ಬ್ರಾಹ್ಮಣರು ಜಾತಿವಾದಿಗಳಲ್ಲ. ಸರ್ವೇಜನಾ ಸುಖಿನೋಭವಂತು ಎಂದು ಹಾರೈಸುವರಾಗಿದ್ದಾರೆ. ಎಂಥಹುದೇ ಕಠಿಣ ಪರಿಸ್ಥಿತಿ ಇದ್ದರೂ ಧನಾತ್ಮಕ ವಿಚಾರಗಳಿಂದ ಎದುರಿಸುತ್ತೇವೆ ಎಂದರಲ್ಲದೆ, ಎಂದಿಗೂ ಜಾತಿಯತೆ ಮಾಡುವದಿಲ್ಲ ಎಂದು ರಾಜ್ಯ ಬ್ರಾಹ್ಮಣ ಅಭಿವೃದ್ಧಿ ನಿಗಮ ಮಂಡಳಿ ಅಧ್ಯಕ್ಷ ಅಸುಗೋಡೆ ಜಯಸಿಂಹ ಹೇಳಿದರು.
ನಗರದ ಜಂಬೂಕೇಶ್ವರ ಮಂದಿರದ ಮೈದಾನದಲ್ಲಿರುವ ಶೃಂಗೇರಿ ಶಂಕರ ಮಠದಲ್ಲಿ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ನಿಗಮ, ತಾಲೂಕಾ ಬ್ರಾಹ್ಮಣ ಸಂಘ ಹಮ್ಮಿಕೊಂಡಿದ್ದ ಅರಿವು ನೆರವು ಕಾರ್ಯಕ್ರಮದಲ್ಲಿಅವರುಮಾತನಾಡಿದರು.
ಆರ್ಥಿಕವಾಗಿ ಹಿಂದುಳಿದ ಸಮಾಜಕ್ಕೆ 2018 ರಲ್ಲಿ ಮಾಜಿ ಮುಖ್ಯಮಂತ್ರಿ ಎಚ್. ಡಿ. ಕುಮಾರಸ್ವಾಮಿ ಅವರ ಅವಧಿಯಲ್ಲಿ ನಿಗಮ ಪ್ರಾರಂಭವಾಗಿತ್ತು. ಮೊದಲು 25 ಕೋಟಿ ರೂ. ಅನುದಾನವಿದ್ದು, ನಂತರ ಭಾರತೀಯ ಜನತಾ ಪಕ್ಷದ ಸರ್ಕಾರದ ಅವಧಿಯಲ್ಲಿ ಆರು ಕೋಟಿ ರೂ. ನೀಡಿದ್ದರು. ಈಗ ಮುಖ್ಯಮಂತ್ರಿ ಸಿದ್ಧರಾಮಯ್ಯ 30 ಕೋಟಿ ರೂ. ಅನುದಾನ ನೀಡಿದ್ದಾರೆ ಎಂದರು.
ನಿಗಮದಿಂದ ನೇರ ಸಾಲ ಸೌಲಭ್ಯವನ್ನು ನೀಡಲು ಅನುಮೋದನೆಯಾಗಿದೆ. ಶೇ. ಇಪ್ಪತ್ತರಷ್ಟು ರಿಯಾಯತಿಯಿದೆ. ಅದಕ್ಕಾಗಿ ಕೌಶಲ್ಯಾಭಿವೃದ್ಧಿ ಇಲಾಖೆಯ ಜೊತೆಗೆ ಸಹಯೋಗ ಮಾಡಿದ್ದೇವೆ. ಈಗಾಗಲೇ 13 ಕೋಟಿ ರೂ. ವಿದ್ಯಾರ್ಥಿ ವೇತನ ನೇರವಾಗಿ ನೀಡಿದ್ದೇವೆ. ಸಾಂದೀಪಿನಿ ವಿದ್ಯಾರ್ಥಿ ವೇತನವನ್ನು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಹದಿನೈದು ಸಾವಿರ ರೂ. ನೇರ ಪಾವತಿ ಮಾಡಿದ್ದೇವೆ. ಐ.ಎ.ಎಸ್. ತರಬೇತಿಗೆ ಒಂದು ಲಕ್ಷ ರೂ. ಸಹಾಯಧನ ನೀಡುತ್ತೇವೆ ಎಂದರು.
ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಮಾತನಾಡಿ, ಬ್ರಾಹ್ಮಣ ಸಮಾಜ ಆರ್ಥಿಕವಾಗಿ ಸಾಕಷ್ಟು ಹಿಂದುಳಿದ ಸಮಾಜವಾಗಿದೆ. ಕಡುಬಡವರು ಸಮಾಜದಲ್ಲಿದ್ದಾರೆ. ನಿಗಮದಿಂದ ದೊರಕುವ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು. ಕೃಷಿಕ ಬ್ರಾಹ್ಮಣರು ಭೂಮಿಯನ್ನು ಉಳಿಸಿಕೊಳ್ಳಬೇಕು. ಕೃಷಿಕರಿಗೆ ನಿಗಮದಿಂದ ಹಲವಾರು ಸೌಲಭ್ಯಗಳಿದ್ದು ಅವುಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಬೇಕು. ನಿಗಮದ ಅಧ್ಯಕ್ಷರು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನಿಗದಿತ ಅನುದಾನದ ಸದುಪಯೋಗ ಪಡಿಸಿಕೊಳ್ಳಬೇಕು.
ಇಲ್ಲವಾದಲ್ಲಿ ಬಳಕೆಯಾಗದೆ ಉಳಿಯುವ ಅನುದಾನ ಸರ್ಕಾರಕ್ಕೆ ವಾಪಸ್ಸಾಗುತ್ತದೆ ಎಂದರು.
ವೇದಿಕೆಯಲ್ಲಿ ತಾಲೂಕಾ ಅಧ್ಯಕ್ಷ ಉಮೇಶ ದೇಸಾಯಿ, ಕಾರ್ಯದರ್ಶಿ ರಾಜೇಂದ್ರ ದೇಸಾಯಿ, ಪಲ್ಲು ಕುಲಕರ್ಣಿ, ಪಿ. ಪಿ. ಜೋಶಿ ಸಹಿತ ಇನ್ನೂ ಹಲವರು ಭಾಗವಹಿಸಿದ್ದರು.

# ತ್ರಿವಿಧ ದಾಸೋಹಿ ಡಾಕ್ಟರ್ ಸಿದ್ಧಲಿಂಗ ಜಗದ್ಗುರುಗಳು

**ನುಡಿದರೆ ಮುತ್ತಿನ ಹಾರದಂತಿರಬೇಕು;**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು;**
**ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು;**
**ನುಡಿದರೆ ಲಿಂಗ ಮೆಚ್ಚಿ**
**ಅಹುದಹುದೆನಬೇಕು;**
**ನುಡಿಯೊಳಗಾಗಿ ನಡೆಯದಿದ್ದರೆ**
**ಕೂಡಲ ಸಂಗಮದೇವ**
**ನೆಂತೊಲಿವನಯ್ಯ...**




ಎನ್ನುವ ವಚನದಂತೆ ತಮ್ಮ ಶಿವಾನುಭವ ಪ್ರವಚನದ ಮೂಲಕ ಶಿವ ಶರಣರ ವಚನ ತತ್ವಗಳನ್ನು ಬೋಧಿಸಿದಂತಹ ಮತ್ತು ಅನುಷ್ಠಾನಕ್ಕೆ ತಂದಂತಹ ಕೀರ್ತಿ ನಮ್ಮ ಡಂಬಳ ಗದಗದ ಸಿದ್ಧಲಿಂಗ ಮಹಾಸ್ವಾಮಿಗಳಿಗೆ ಸಲ್ಲುತ್ತದೆ. ಪ್ರವಚನವಷ್ಟೇ ಅಲ್ಲದೆ ತ್ರಿವಿಧ ದಾಸೋಹಿ ಎಂಬ ಹೆಗ್ಗಳಿಕೆಗೆ ಭಾಜನರಾದಂತಹ ಶ್ರೇಷ್ಠ ವ್ಯಕ್ತಿತ್ವಅವರದಾಗಿತ್ತು. ತೋಂಟದಾರ್ಯ ಮಠದ ಇತಿಹಾಸ ಮತ್ತು ಪ್ರಮುಖ ಘಟನೆಗಳು: ತೋಂಟದಾರ್ಯ ಮಠವು 15 ನೇ ಶತಮಾನದಲ್ಲಿ ಶಿವಯೋಗಿ ಸೂರ್ಯ ಶ್ರೀ ಎಡೆಯೂರು ತೋಂಟದ ಸಿದ್ಧಲಿಂಗ ಯತಿಗಳ ನೇರ ವಾರಸುದಾರಿಕೆಯ ಮಠವಾಗಿದೆ. ಈ ಮಠ ಲಿಂಗಾಯತ ಪರಂಪರೆಯಲ್ಲಿಯೇ ವಿಶೇಷ ಸ್ಥಾನ ಹೊಂದಿದೆ. 19 ನೇ ಪೀಠಾಧಿಕಾರಿಗಳಾಗಿ ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು 1974 ರಿಂದ 2018 ರವರೆಗೆ ಸುಮಾರು ನಾಲ್ಕು ದಶಕಗಳ ಕಾಲ ಮಠವನ್ನು ಪರಿಪಾಲಿಸಿದರು.ಅವರುಮಠವನ್ನುಜನಪರ, ಜ್ಞಾನಪರ ಸಂಸ್ಥೆಯಾಗಿ ರೂಪಿಸಿ ಜಾತಿ, ಮತ, ಲಿಂಗಭೇದವಿಲ್ಲದೆ ಸಮಾನತೆಗಾಗಿ ಹೋರಾಟ ನಡೆಸಿದರು. ಅವಿರತ ಜನಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡು ವಿವಿಧ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ಮೂಲತಃ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಕೋರವಾರ ಗ್ರಾಮದಲ್ಲಿ ಶಂಕ್ರಮ್ಮ ಮತ್ತು ಮರೆಯ್ಯನವರ ಮುದ್ದಿನ ಕಣ್ಮಣಿಯಾಗಿ ಬೆಳೆದರೂ ಮುಂದೆ ಹುಬ್ಬಳ್ಳಿ ಮೂರುಸಾವಿರ ಮಠದಲ್ಲಿ ಶಿಕ್ಷಣ ಪೂರೈಸಿದರು. ಪೀಠಾರೋಹಣ: 1974 ರ ಜುಲೈ 29 ರಂದು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಪೀಠ ಪರಂಪರೆಯ 19 ನೇ ಪೀಠಾಧಿಪತಿಯಾಗಿ ಡಂಬಳ–ಗದಗ ಸಂಸ್ಥಾನ ಮಠಕ್ಕೆ ಅಧಿಕಾರ ವಹಿಸಿಕೊಂಡರು. ಅವರ ನೇತೃತ್ವದಲ್ಲಿ ಮಠವು ಧಾರ್ಮಿಕ ಮತ್ತು ಸಮಾಜ ಸೇವೆಯ ನಾನಾ ಕ್ಷೇತ್ರಗಳಲ್ಲಿ ಚೈತನ್ಯವಾಯಿತು. ಸಮಾಜ ಸೇವೆ: ದಲಿತರು, ದೀನ ದುಸ್ಥಿ:ತಿಗೊಳಿದವರ ಸೇವೆಯಲ್ಲಿ ಭಾಗಿಯಾಗಿ ಮಠದ ಬಾಗಿಲುಗಳನ್ನು ಎಲ್ಲಾ ಜನಾಂಗ ಮತ್ತು ವರ್ಗದವರಿಗೆ ಮುಕ್ತಗೊಳಿಸಿದ್ದರು. ಇದು ಸಾಮಾಜಿಕ ಸಮಾನತೆ ಮತ್ತು ಪರಿವರ್ತನೆಗೆ ಮಹತ್ವದ ಹಾದಿಯಾಗಿತ್ತು. ಬಸವಣ್ಣನವರ ಅನುಯಾಯಿ ಮತ್ತು ಅವರ ತತ್ವಗಳನ್ನು ಸಮಾಜ ಸುಧಾರಣೆಯಾಗಿಸಲು ಪ್ರಯತ್ನಿಸಿದರು. ಪರಿಸರ ಹೋರಾಟ: ಕಪ್ಪತ್ತಗುಡ್ಡದ ಪರಿಸರವನ್ನು ಕಾಪಾಡಲು ಪೋಸ್ಕೋ ಉಕ್ಕಿನ ಕೈಗಾರಿಕಾ ಸ್ಥಾಪನೆಯನ್ನು ತೀವ್ರವಾಗಿ ವಿರೋಧಿಸಿ ಯಶಸ್ವಿ ಚಳುವಳಿ ನಡೆಸಿದರು. ಧಾರ್ಮಿಕ ಸಂಸ್ಕೃತಿ: ಬಸವತತ್ವ ಹಾಗೂ ಲಿಂಗಾಯತ ತತ್ವಗಳ ಶ್ರೇಷ್ಠ ಪ್ರತಿಪಾದಕರು. ಸಾಮಾಜಿಕ ನ್ಯಾಯ, ದಲಿತರ ಏಕತೆ, ಜಾತ್ಯತೀತ ಸಮಾಜ ನಿರ್ಮಾಣದ ಪರಿಪಾಟಿಯಲ್ಲಿ ಸಂಕೀರ್ಣ ಸಂಚಲನ ಮಾಡಿದರು. ಬಹುಮಾನಗಳು: ರಾಷ್ಟ್ರಪತಿ ಭವನದಲ್ಲಿ 2001 ರಲ್ಲಿ ರಾಷ್ಟ್ರೀಯ ಕೋಮು ಸೌಹಾರ್ದತಾ ಹಾಗೂ ದೇಶದ ಏಕತಾ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ ಪಡೆದವರು. ವಚನ ಮತ್ತು ಸಾಹಿತ್ಯ: ದಲಿತರು ಮತ್ತು ಹಿಂದುಳಿದ ವರ್ಗದ ಜನರಿಗೆ ಪ್ರೇರಣೆ ನೀಡಿದ್ದಾರೆ. ಮಠದಲ್ಲಿ ದಲಿತರು ಮತ್ತು ಹಿಂದುಳಿದವರ ಒಗ್ಗಟ್ಟು ಹಾಗೂ ಸಾಹಿತ್ಯ ಚಟುವಟಿಕೆಯಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದಾರೆ. ವೈಯಕ್ತಿಕ ನಡತೆ: ನ್ಯಾಯ ನಿಷ್ಠುರ, ನಿರ್ದ್ವಂದ್ವ, ನಿರಾಡಂಬರ, ಆಧುನಿಕತೆ ಹಾಗೂ ಪ್ರಗತಿಪರ ವಿಚಾರಧಾರೆಗಳ ಧಾರಕ. ಎಂ. ಎಂ. ಕಲಬುರಗಿ ಅವರ ವಿದ್ಯಾರ್ಥಿಯಾಗಿದ್ದವರು.ತೊಂಟಾದಾರ್ಯ ಸಿದ್ಧಲಿಂಗ ಮಹಾಸ್ವಾಮಿಗಳು ಸಮಾಜ, ಧರ್ಮ, ಅಧ್ಯಾತ್ಮ ಮತ್ತು ಪರಿಸರ ಕ್ಷೇತ್ರಗಳಲ್ಲಿ ಅಪಾರ ಸೇವೆ ನೀಡಿದ ಧಾರ್ಮಿಕ ಗುರು ಮತ್ತು ಸಮಾಜ ಸುಧಾರಕರಾಗಿದ್ದಾರೆ. ಅವರು ಮೂಢ ನಂಬಿಕೆ, ಜಾತ್ಯತೀತ ಸಮಾಜದ ನಿರ್ಮಾಣ ಹಾಗೂ ಪರಿಸರ ರಕ್ಷಣೆಯಲ್ಲಿ ಶ್ರೇಷ್ಠ ಕಾರ್ಯಗಳನ್ನು ಮಾಡಿದ್ದಾರೆ. ಅಲ್ಲದೆ ಪ್ರತಿ ಸೋಮವಾರ ಧರ್ಮ ಗ್ರಂಥ ಪಠಣ, ವಚನ ಚಿಂತನೆ ಇಂತಹ ಹತ್ತು ಹಲವಾರು ಕಾರ್ಯಕ್ರಮಗಳನ್ನು ಶ್ರೀ ಮಠದಲ್ಲಿ ಹಮ್ಮಿಕೊಳ್ಳುತ್ತಿದ್ದರು. ಅಲ್ಲದೆ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದಂತಹ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಬಸವೇಶ್ವರ ಶಾಲೆ ಮತ್ತು ಇಂಜಿನಿಯರಿಂಗ್ ಕಾಲೇಜು ವೃತ್ತಿಪರ ಕೋರ್ಸುಗಳ ಕಾಲೇಜು ತೆರೆದಿದ್ದಾರೆ. ಚಿಕ್ಕ ಮಕ್ಕಳಲ್ಲಿ ಬಸವ ಪ್ರಜ್ಞೆ ಮೂಡಿಸಲು ವಚನ ಕಂಠ ಪಾಠಗಳ ಸ್ಪರ್ಧೆ ಏರ್ಪಡಿಸಿ ವಿಜೇತರಾದಂತಹ ಮಕ್ಕಳಿಗೆ ಬಹುಮಾನ ನೀಡುತ್ತಾರೆ. ಒಟ್ಟಿನಲ್ಲಿ ಹೇಳುವದಾದರೆ ಗದಗ ಜಿಲ್ಲೆಯ ಶಿಕ್ಷಣ ಕ್ರಾಂತಿಯ ಹರಿಕಾರರು ನಮ್ಮ ಶ್ರೀಗಳು. ಅಲ್ಲದೆ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಒದಗಿಸಿ ಕೊಡಲು ಅವಿರತ ಶ್ರಮಿಸಿದ್ದಾರೆ. ಸಿಂದಗಿ ತುಂಬಿತೆಲ್ಲಡೆ ಜ್ಞಾನದ ಬಿಂದಿಗೆ ಎನ್ನುವ ವಾಣಿ ಅಕ್ಷರಸಹ ಸತ್ಯ ಮಾಡಿದ್ದಾರೆ. ಹತ್ತು ಹಲವಾರು ಪ್ರಶಸ್ತಿಗೆ ಭಾಜನರಾಗಿದ್ದರೂ ಯಾವುದೇ ಆಡಂಬರವಿಲ್ಲದೆ, ಹಮ್ಮು ಬಿಮ್ಮಿಲ್ಲದೇ ಶೀಮಠದ ಏಳಿಗೆಗೆ ಶ್ರಮಿಸಿದವರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಸಾಮಾನ್ಯರ ಸ್ವಾಮೀಜಿ.. ಬಸವಶ್ರೀ ಪ್ರಶಸ್ತಿ, ಕನ್ನಡ ಜಗದ್ಗುರು ಪ್ರಶಸ್ತಿ ಹೀಗೆ ಹತ್ತು ಹಲವಾರು ಪ್ರಶಸ್ತಿಗೆ ಭಾಜನರು. ಜಾತ್ರಾ ಮಹೋತ್ಸವದಲ್ಲೂ ಸಹ ಆರೋಗ್ಯ ತಪಾಸಣೆ ಶಿಬಿರ, ಯೋಗ ಶಿಬಿರ, ರಕ್ತದಾನ ಶಿಬಿರ ನಡೆಸುವಲ್ಲಿ ಶ್ರೀಮಠ ತನ್ನದೇ ಆದಂತಹ ಖ್ಯಾತಿ ಹೊಂದಿದೆ. ಇಂತಹ ಎಲ್ಲ ಸಮಾಜಮುಖಿ ಕಾರ್ಯವನ್ನು ಪರಿಗಣಿಸಿ ಶ್ರೀಗಳಿಗೆ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವ ವಿದ್ಯಾಲಯವು 2013 ರಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತು. ಇಂತಹ ಮಹಾನ್ ಚೇತನರು ಶರಣರಿಗೆ ಮರಣವೇ ಮಹಾನವಮಿ ಎನ್ನುವ ರೀತಿಯಲ್ಲಿ 2018 ರ ಅಕ್ಟೋಬರ್ 20 ರಂದು ಸಕಲಭಕ್ತರಬಳಗವನ್ನು ಅಗಲಿದರು. ನೆನಪು ಮಾತ್ರ ಅಜರಾಮರ. ಏಕೆಂದರೆ ನಾನು ಬಾಲ್ಯದಿಂದಲೂ ಮಠದ ಆವರಣದಲ್ಲಿ ವಚನ ಮತ್ತು ಸಂಗೀತ ಕಲಿಯುವಾಗ ನನಗೆ ನೀಡಿದ ಪ್ರೋತ್ಸಾಹ ಮತ್ತು ಘನಾಶೀರ್ವಾದದಿಂದ ಎಂತಹ ಪರಸ್ಥಿತಿ ಬರಲಿ ಗೆಲ್ಲುವೆ ಎನ್ನುವ ಧೈರ್ಯ ಮೂಡಿಸಿರುವ ಶ್ರೀಗಳು ಎಂದೆಂದಿಗೂ ಅಜರಾಮರ. ಶರಣು ಶರಣಾರ್ಥಿಗಳು.



**ಲೇಖನ : ಶಿಲ್ಪಾ ಮೃತ್ಯುಂಜಯ ಮಿಣಜಿಗಿ**
**ಶಿಕ್ಷಕಿ, ಧಾರವಾಡ**


# ಭಾರತೀಯ ಮಹಿಳೆಯರಿಂದ ದೇಶದ ಆರ್ಥಿಕತೆ ಸುಧಾರಣೆ: ಕೆ.ಉಲ್ಲಾಸ ಕಾಮತ್





**ಬಾಗಲಕೋಟೆ :** ಭಾರತದಲ್ಲಿ ಗೃಹಣಿಯರು ಕುಟುಂಬದ ಆರ್ಥಿಕತೆಯನ್ನು ಕಟ್ಟುವಲ್ಲಿ ಯಶಸ್ವಿಯಾಗಿದ್ದು, ಮುಂದಿನ 50ರಿಂದ 100 ವರ್ಷಗಳಲ್ಲಿ ಮಹಿಳೆಯರಿಂದಲೇ ಭಾರತದ ಆರ್ಥಿಕತೆ ಸುಧಾರಿಸಲಿದೆ, ಆ ನಿಟ್ಟಿನಲ್ಲಿ ಜಗತ್ತಿನ ಆರ್ಥಿಕತೆಯ ಶ್ರೇಣಿಯಲ್ಲಿ ಭಾರತ ಹೆಚ್ಚಿನ ಸ್ಥಾನ ಪಡೆಯಬೇಕೆಂದರೆ ಭಾರತೀಯ ಮಹಿಳೆಯರಿಂದಲೇ ಸಾದ್ಯ ಎಂದು ಜ್ಯೋತಿ ಲ್ಯಾಬ್ಸ್ ಲಿಮಿಟೆಡ್ ನಿಕಟಪೂರ್ವ ಜಂಟಿ ನಿರ್ವಹಣಾ ನಿರ್ದೇಶಕರು, ಹಾಗೂ ಯುಕೆ ಮತ್ತು ಕಂಪನಿ ಸಂಸ್ಥಾಪಕರಾದ ಕೆ,ಉಲ್ಲಾಸ ಕಾಮತ್ ಹೇಳಿದರು
ನಗರದ ಬಿ.ವಿ.ವಿ.ಸಂಘದ ಬಸವೇಶ್ವರ ಇಂಜನೀಯರಿಂಗ್ ಕಾಲೇಜು ಸಭಾಭವನದಲ್ಲಿ ಸೋಮವಾರ ನಡೆದ ಬಿ.ವಿ.ವಿ.ಎಸ್ ಇನ್ಸ್ಟಿಟ್ಯೂಟ್ ಮ್ಯಾನೇಜಮೆಂಟ್ ಸ್ಟಡೀಸ್ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು ಎಂಬಿಎ ಸ್ನಾತಕೋತ್ತರ ಶಿಕ್ಷಣ ಮುಗಿಸಿ ಪದವಿ ಪಡೆಯುವುದು ಒಂದು ಮುಖ್ಯ ಅಂತ, ಆದರೆ ಜೀವನದಲ್ಲಿ ನಿತ್ಯ ಓದು ಪರೀಕ್ಷೆಗಳು ನಿರಂತರ, ಇಂದಿನ ಮಕ್ಕಳಿಗೆ ಮೊಭೈಲ ಮುಖ್ಯವಾದರೂ, ಅದರ ಮೇಲೆ ಅವಲಂಬಿತವಾಗಬಾರದು, ವಿದ್ಯಾರ್ಥಿಗಳು ಮೊಬೈಲನ್ನು ಜ್ಞಾನಕ್ಕಾಗಿ ಬಳಸಿ, ಸ್ಟೆಟಸ್.ಸೆಲ್ಫಿ, ರೀಲ್ಸಗಳಿಂದ ಯಾವುದೆ ಪ್ರಯೋಜನವಿಲ್ಲ, ಕರ್ನಾಟಕದಲ್ಲಿ ಪ್ರತಿವರ್ಷ 21 ಲಕ್ಷ ಪದವಿದರರು ಔದ್ಯೋಗಿಕ ಕ್ಷೇತ್ರಕ್ಕೆ ಬರುತ್ತಾರೆ, ಸುಮಾರು 20 ಲಕ್ಷ ಉದ್ಯೋಗಳು ಸೃಷ್ಟಿಯಾಗುತ್ತಲೇ ಇವೆ, ಈ ಉದ್ಯೋಗಳು ನಮಗೆ ಸಿಗಬೇಕಾದರ ನಾವುಗಳು ಉದ್ಯೋಗ ಸಂದರ್ಶನದಲ್ಲಿ ಕೌಶಲ್ಯಗಳನ್ನು ಪ್ರದರ್ಶಿಸಬೇಕಾಗುತ್ತದೆ, ಉತ್ತರಕರ್ನಾಟಕದ ಜನರ ಪ್ರಾಮಾಣಿಕತೆ ನಿಷ್ಠೆ, ಕಾರ್ಯಕ್ಷಮತೆ ಎಲ್ಲರಿಗೂ ಇಷ್ಟವಾಗುತ್ತದೆ, ಶಾಲೆ ಕಾಲೇಜುಗಳಲ್ಲಿ ತಂದೆ ತಾಯಿಗಳು ನಿಮ್ಮ ಮೇಳೆ ಬಂಡವಾಳ ಹಾಕಿ ಪದವಿದರರನ್ನಾಗಿ ಮಾಡುತ್ತಾರೆ, ಕಂಪನಿಗಳು ನಿಮ್ಮಮೇಲೆ ಬಂಡವಾಳ ಹಾಕಿ ನಿಮ್ಮನ್ನ ಕಂಪನಿಯ ರಾಯಬಾರಿಯನ್ನಾಗಿ ಮಾಡುತ್ತವೆ ಎಂಬ ಅರಿವು ನಮಗಿರಬೇಕು, ಜಗತ್ತಿನಲ್ಲಿ 100 ಟ್ರೀಲಿಯನ್ ಡಾಲರ್ಸ್ ವ್ಯಾಪಾರ ವಹಿವಾಟು ಇದೆ, ಜಗತ್ತಿನಲ್ಲಿ 800 ಕೋಟಿ ಜನ ಇದ್ದಾರೆ ಅದರಲ್ಲಿ 140 ಕೋಟಿ ಭಾರತದಲ್ಲಿದ್ದಾರೆ, ಕರ್ನಾಟಕದಲ್ಲಿ 7 ಕೋಟಿ ಜನ ಇದ್ದಾರೆ, ಜಗತ್ತಿನಲ್ಲಿ ಜನಸಂಖ್ಯೆ ಪ್ರಕಾರ 14% ಪ್ರತಿಶತ ಇದ್ದವೆ, ಜಿಡಿಪಿ ಪ್ರಕಾರ 4ನೇ ಸ್ಥಾನದಲ್ಲಿದೆವೆ, ಭಾರತದಲ್ಲಿ ಅದರಲ್ಲೂ ದಕ್ಷಿಣ ಭಾರತ ಶೈಕ್ಷಣಿಕವಾಗಿ ಮುಂದುವರೆದಿದ್ದು ಅದರಲ್ಲೂ ಕರ್ನಾಕಟ ಮುಂದಿದೆ ಎಂದರು.
ಗೌರವಅತಿಥಿಗಳಾಗಿಆಗಮಿಸಿದಬಾಗಲಕೋಟೆ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ, ಆನಂದ ದೇಶಪಾಂಡ ಅವರು ಮಾತನಾಡಿ ಬಿ.ವಿ.ವಿ.ಸಂಘದ ಎಲ್ಲ ಶಿಕ್ಷಣ ಸಂಸ್ಥೆಗಳನ್ನು ನೋಡಿದರೆ ಅದ್ಭುತ ಎನಿಸುತ್ತದೆ, ಇಲ್ಲಿ ಉತ್ತಮ ಶಿಕ್ಷಕರ ತಂಡ ಇದೆ, ಒಳ್ಳೆಯ ಮೂಲಭೂತ ಸೌಕರ್ಯವಿದೆ, ಒಳ್ಳೆಯ ವಿದ್ಯಾರ್ಥಿಗಳಿದ್ದಾರೆ. ರಾಜ್ಯಕ್ಕೆ ಇದೊಂದು ಮಾದರಿ ಸಂಸ್ಥೆಯಾಗಿದೆ, ಶಿಕ್ಷಣದ ಜೊಯೆಗೆ ವಿದ್ಯಾರ್ಥಿಗಳಿಗೆ ಬದುಕಿನ ಅನುಭವದ ಮೌಲ್ಯಗಳ ಅರಿವು ಮುಖ್ಯವಾಗಿವೆ, ಬಾಗಲಕೋಟೆ ವಿಶ್ವ ವಿದ್ಯಾಲಯದಿಂದ ಉತ್ತಮ ಶೈಕ್ಷಣಿಕ ಕ್ಷೇತ್ರ ಬೇಳವಣಿಗೆಯಲ್ಲಿ ತನ್ನದೆಯಾದ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದೆ ಎಂದರು.
ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ಅವರು ಮಾತನಾಡಿ ಈ ಭಾಗದ ವಿದ್ಯಾರ್ಥಿಗಳಿಗೆ ಅನೂಕಲವಾಗಿ ವ್ಯಾಪಾರ ವ್ಯವಹಾರ ಹಾಗೂ ಮಾರ್ಕೇಟ ಕ್ಷೇತ್ರ ಬೇಳೆಯಬೇಕೆಂಬ ಕಾರ್ಯಾಧ್ಯಕ್ಷರಾದ ಡಾ. ವೀರಣ್ಣ ಚರಂತಿಮಠ ಅವರ ಆಶಯದಂತೆ ಎಂ.ಬಿ,ಎ ಸಂಸ್ಥೆ ಉತ್ತಮ ವಿದ್ಯಾರ್ಥಿಗಳನ್ನು ನಾಡಿಗೆ ನೀಡುತ್ತಿದೆ ಎಂದರು.
ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಬಾವಿ, ನಿರ್ದೇಶಕರಾದ ಡಾ.ಪ್ರಕಾಶ ವಡವಡಗಿ ವೇದಿಕೆ ಮೇಲೆ ಉಪಸ್ಥಿತರಿದ್ದರು.
ಪದವಿ ಪ್ರದಾನ: ಇನ್ಸ್ಟಿಟ್ಯೂಟ್ ಮ್ಯಾನೇಜಮೆಂಟ್ ಸ್ಟಡೀಸ್‌ನ ಸುಮಾರ 60 ಜನ ಪದವಿದರರಿಗೆ ಪದವಿ ಪ್ರದಾನ ಮಾಡಲಾಯಿತು.
ಶ್ರೀನಿಧಿ ಸಂಗಡಿಗರಿಂದ ಪ್ರಾರ್ಥನೆ ಸಲ್ಲಿಸಲಾಯಿತು, ನಿರ್ದೇಶಕ ಡಾ.ಪ್ರಕಾಶ ವಡವಡಗಿ ಸ್ವಾಗತಿಸಿದರು, ಡಾ.ಪವನ ಬೇನಕಟ್ಟಿ ಕಾಲೇಜು ನಡೆದ ಬಂದ ದಾರಿಯ ಬಗ್ಗೆ ವಿವರಣೆ ನೀಡಿದರು, ಡಾ.ಅಮರೇಶ ಚರಂತಿಮಠ ಹಾಗೂ ಸಂತೋಷ ಕುಮಾರ ನಿರೂಪಿಸಿದರು.

# ನಿರುಪಯುಕ್ತ ವಸ್ತುಗಳಿಂದ ಪ್ಲಾವರಪಾಟ ರಚನೆ



**ರಬಕವಿ–ಬನಹಟ್ಟಿ:** ಇಲ್ಲಿನ ನಗರಸಭೆಯ ಆರೋಗ್ಯ ವಿಭಾಗದ ಕಿರಿಯ ನಿರೀಕ್ಷಕಿ ಲಕ್ಷ್ಮೀ ತೊನಶ್ಯಾಳ ಅವರು ನಿರುಪಯುಕ್ತ ಪೇಪರದಿಂದ ಪ್ಲಾವರ್ ಪಾಟ್ ಮಾಡುವ ಮೂಲಕ ತ್ಯಾಜ್ಯ ವಸ್ತುಗಳನ್ನು ಮರು ಬಳಕೆ ಮಾಡಿಕೊಳ್ಳುವ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಕಚೇರಿಯಲ್ಲಿ ಸಾರ್ವಜನಿಕರ ಗಮನ ಸೆಳೆಯುವಂತೆ ಮಾಡಿದ್ದಾರೆ.

# ಬಾಲಕಿ ಮೇಲೆ ಬಾಲಕನಿಂದ ಲೈಂಗಿಕ ದೌರ್ಜನ್ಯ: ಪ್ರಕರಣ ದಾಖಲು



**ಗಂಗಾವತಿ :** ತಾಲ್ಲೂಕಿನ ಗ್ರಾಮವೊಂದರಲ್ಲಿ ಬಾಲಕಿ ಮೇಲೆ ಬಾಲಕನೊಬ್ಬ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಇಲ್ಲಿನ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಎಫ್‌ಐಆರ್ ದಾಖಲಾಗಿದೆ.

ನಾಲ್ಕು ವರ್ಷದ ಬಾಲಕಿಯ ತಾಯಿ ದೂರು ನೀಡಿದ್ದು 'ನನ್ನ ಮಗಳು ಅಂಗನವಾಡಿ ಶಾಲೆ ಬಳಿ ಆಡವಾಡುತ್ತಿದ್ದಾಗಘಟನೆನಡೆದಿದೆ.ಆಕೆಗೆಸರಿಯಾಗಿ ಮಾತು ಕೂಡ ಬರುವುದಿಲ್ಲ. ಅಂಗನವಾಡಿ ಕೇಂದ್ರದ ಬಳಿಯಿರುವ ಶೌಚಾಲಯದಲ್ಲಿ ಬಾಲಕ ಲೈಂಗಿಕ ಬಯಕೆಯಿಂದ ಮಗಳ ಮೈ ಕೈ ಮುಟ್ಟಿ ಶೌಚಾಲಯದ ಒಳಗೆ ಕರೆದುಕೊಂಡು ಹೋಗುತ್ತಿದ್ದಾಗ ನಾನು ಚೀರಿದೆನು. ಆಗ ಬಾಲಕ ನನ್ನ ಮಗಳನ್ನು ಶೌಚಾಲಯದಿಂದ ಹೊರಗಡೆ ದಬ್ಬಿ ಒಳಗಡೆ ಚಿಲಕ ಹಾಕಿಕೊಂಡಿದ್ದಾನೆ' ಎಂದು ದೂರಿದ್ದಾರೆ.

ಘಟನೆ ಸೂಕ್ಷ್ಮವಾಗಿದ್ದರಿಂದ ಪೊಲೀಸರಿಗೆ ದೂರು ನೀಡಲು ತೆರಳುವಾಗಲೂ ಬಾಲಕನ ಕುಟುಂಬದವರು ಮಾರ್ಗಮಧ್ಯದಲ್ಲಿ ಅಡ್ಡಗಟ್ಟಿ ಮಗನ ಮೇಲೆ ಪ್ರಕರಣ ದಾಖಲಿಸಿದರೆ ಜೀವಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಒಡ್ಡಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ಇಲ್ಲಿನ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

# ಜಿಲ್ಲಾ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆ



**ಕೊಪ್ಪಳ :** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳು ಬೀದರ್‌ನಲ್ಲಿ ಜರುಗಿದ ಕಲಬುರಗಿ ವಿಭಾಗ ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟದ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ಬೀದರ್‌ನಲ್ಲಿ ಜರುಗಿದ ಕಲಬುರಗಿ ವಿಭಾಗ ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ 14 ವರ್ಷ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ ಅನಿತಾ, ಶಾರದಾ, ಸ್ಫೂರ್ತಿ, ಸಿಂಧು, ಅರ್ಚನಾ, ಮಾನಸ ಮತ್ತು ಭೂಮಿಕಾ ಅವರನ್ನೊಳಗೊಂಡ ತಂಡ, 17 ವರ್ಷ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ ದೀಕ್ಷಿತಾ, ಕಾವೇರಿ, ಲತಾ, ಸ್ಫೂರ್ತಿ, ಪ್ರಿಯಾಂಕ, ಪಾರ್ವತಿ ಹಾಗೂ ಯಲ್ಲಮ್ಮ ಅವರನ್ನೊಳಗೊಂಡ ತಂಡ ಮತ್ತು 17 ವರ್ಷ ವಯೋಮಿತಿಯ ಬಾಲಕರ ವಿಭಾಗದಲ್ಲಿ ನಿಖಿಲ್, ರಿಷಿನಾಯಕ್, ಅಭಿಲಾಶ್, ಎಂ.ಡಿ.ಇಮ್‌ದಾದ್ ಶೇಖ್, ಶ್ರೀಶೈಲ್, ಚೇತನ್ ಹಾಗೂ ಪೂಜಿತ್ ಸಿಧು ಅವರನ್ನೊಳಗೊಂಡ ತಂಡಗಳು ಪ್ರಥಮ ಸ್ಥಾನ ಗಳಿಸಿ, ಅ.16 ರಂದು ಚಿಕ್ಕಮಂಗಳೂರು ಜಿಲ್ಲೆಯ ತರೀಕೆರೆಯಲ್ಲಿ ನಡೆಯಲಿರುವ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.

ಕ್ರೀಡಾಪಟುಗಳಿಗೆ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಠ್ಠಲ್‌ಜಾಬಗೌಡರ್, ವಾಲಿಬಾಲ್ ತರಬೇತುದಾರ ಸುರೇಶ, ಖೇಲೋಇಂಡಿಯಾವಾಲಿಬಾಲ್ ತರಬೇತುದಾರರಾದ ದೀಪಾ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ

# ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ, ಗುರುವಂದನೆ



**ಮುನಿರಾಬಾದ್:**ಸಮೀಪದಹೊಸಬಂಡಿಹರ್ಲಾಪುರ ಸರ್ಕಾರಿ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿಗಳು ತಮ್ಮ ಗುರುಗಳ ಗೌರವಾರ್ಥ 'ಗುರು ವಂದನೆ' ಕಾರ್ಯಕ್ರಮವನ್ನು ನಾರಾಯಣಪೇಟೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದರು.

2003ನೇ ಸಾಲಿನ ಹಳೆಯ ವಿದ್ಯಾರ್ಥಿಗಳ ನೇತೃತ್ವದಲ್ಲಿ ಸ್ನೇಹ ಸಮ್ಮಿಲನ ಕಾರ್ಯಕ್ರಮ ನಡೆಯಿತು. ಹಳೆಯ ಶಿಷ್ಯರನ್ನು ಉದ್ದೇಶಿಸಿ ಮಾತನಾಡಿದ ನಿವೃತ್ತ ಶಿಕ್ಷಕ ಬಾಳಪ್ಪ ಪತ್ತಾರ,'ನಿಮ್ಮ ಮಕ್ಕಳ ಕೈಯಲ್ಲಿ ಮೊಬೈಲ್ ಕೊಡಬೇಡಿ, ಬದಲಿಗೆ ಒಂದು ಪುಸ್ತಕ ಕೊಡಿ' ಎಂದು ಕಿವಿಮಾತು ಹೇಳಿದರು.

ನಿಸ್ವಾರ್ಥ ಪ್ರೀತಿ ತೋರಿಸುವ ತಂದೆ, ತಾಯಿ ನಂತರ ಬರುವುದೇ ಗುರುವಿನ ಸ್ಥಾನ. ಅಂತಹ ಗುರುಗಳನ್ನು ಸ್ಮರಿಸಿ ಸನ್ಮಾನಿಸುತ್ತಿರುವುದು ಶ್ಲಾಘನೀಯ ಎಂದರು. ಶಿಕ್ಷಕ ನೇಮಿರಾಜ ಹವಳೆ,'ಸ್ವಯಂ ಶಿಸ್ತು ಮತ್ತು ಕಲಿಕೆ ವ್ಯಕ್ತಿಯನ್ನು ಉನ್ನತ ಶಿಖರಕ್ಕೆ ಕೊಂಡೊಯ್ಯುತ್ತದೆ ಎಂದರು.

ಹಳೆಯ ವಿದ್ಯಾರ್ಥಿಗಳೆಲ್ಲ ಸೇರಿ ಶಿಕ್ಷಕರು ಹಾಗೂ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ,

ಆಶೀರ್ವಾದ ಪಡೆದರು. ವೆಂಕಟೇಶ ಅಜ್ಜಂಪುರ, ಕುಸುಮಾ, ಮುಕ್ತಾಬಾಯಿ ಇತರರು ಇದ್ದರು.

ಮಂಜುನಾಥ ಆಗೋಲಿ ಮತ್ತು ಜ್ಯೋತಿ ಆನೆಗೊಂದಿ ಅವರಿಂದ ಸಂಗೀತ ಮತ್ತು ಹಾಸ್ಯ ಕಾರ್ಯಕ್ರಮ ಜರುಗಿತು.

# ವ್ಯವಸ್ಥಿತ ಗ್ರಂಥಾಲಯ ಆರಂಭಿಸಿದ 'ಪುಣ್ಯಕೋಟಿ' ಗುಂಪು



**ಕಾರಟಗಿ :** ವಿದ್ಯಾರ್ಥಿಗಳ ಜ್ಞಾನ ಸಂಪಾದನೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸಹಾಯಕವಾಗುವ ಹೈಟೆಕ್ ಗ್ರಂಥಾಲಯ ಸ್ಥಾಪಿಸಬೇಕು ಎಂಬ ಅನೇಕರ ಮನವಿಗೆ ಕೊಪ್ಪಳ ಜಿಲ್ಲೆಯ ಜನಪ್ರತಿನಿಧಿಗಳು, ಸ್ಥಳೀಯ ಸಂಸ್ಥೆ ಸ್ಪಂದಿಸಿರಲಿಲ್ಲ. ಇದನ್ನೇ ಸವಾಲಾಗಿ ತೆಗೆದು–ಕೊಂಡ ಯುವಕರ 'ಪುಣ್ಯ–ಕೋಟಿ' ಗುಂಪು ಸುಸಜ್ಜಿತ 'ಜ್ಞಾನ ಭಂಡಾರ' ಆರಂಭಿಸಿದೆ.

ಪುಣ್ಯಕೋಟಿ' ಗುಂಪಿನ ಯುವಕರು ನಾಲ್ಕು ತಿಂಗಳ ಹಿಂದೆ ಪಟ್ಟಣದ ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ಒಂದು ಕೋಣೆಯನ್ನು ಬಾಡಿಗೆಗೆ ಪಡೆದು, 2.5 ಲಕ್ಷಕ್ಕೂ ಹೆಚ್ಚಿನ ಸ್ವ–ಂತ ಹಣ ಖರ್ಚು ಮಾಡಿ ಜ್ಞಾನ ಭಂಡಾರವನ್ನು (ಗ್ರಂಥಾಲಯ) ಸ್ಥಾಪಿಸಿದೆ. ಗೃಹಿಣಿ ಜಯಶ್ರೀ ಚನ್ನಯ್ಯಸ್ವಾಮಿ ಶೀಲವಂತರ ಅವರಿಂದ ಈ ಗ್ರಂಥಾಲಯವನ್ನು ಉದ್ಘಾಟಿಸಿದ್ದಾರೆ.

ಜ್ಞಾನ ಭಂಡಾರ' ಕೇಂದ್ರದಲ್ಲಿ ದಿನಪತ್ರಿಕೆ, ವಾರ ಪತ್ರಿಕೆ, ಕಥೆ, ಕಾದಂಬರಿ,ವೈಚಾರಿಕ ಪುಸ್ತಕಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸಹಕಾರಿಯಾಗುವ ಜೊತೆಗೆ ವಿವಿಧ ಇಲಾಖೆಗಳ ನೇಮಕಾತಿಗಳಿಗೆ ಸಹಕಾರಿಯಾಗುವ ಪುಸ್ತಕಗಳು ಇವೆ.

ಕೊಠಡಿಯಲ್ಲಿ 2 ಸಾಲುಗಳ ಕೌಂಟರ್ ಮಾಡಿ, ಏಕಕಾಲಕ್ಕೆ 14 ಜನರು ಅಭ್ಯಾಸದಲ್ಲಿ ನಿರತರಾಗುವಂತೆ ವ್ಯವಸ್ಥೆ ಕಲ್ಪಿಸಲಾಗಿದೆ. ಓದುಗರ ಆಸಕ್ತಿಗೆ ತಕ್ಕಂತೆ ವಿವಿಧ ಪುಸ್ತಕಗಳನ್ನು ತರಿಸಿ, ಪುಸ್ತಕ ಸಂಗ್ರಹಣೆ ವಿಭಾಗದಲ್ಲಿರಿಸುವ ಕಾರ್ಯ ನಿರಂತರವಾಗಿ ನಡೆದಿದೆ. ವಿವಿಧೆಡೆ ಕಾರ್ಯಗಾರಗಳನ್ನು ಆಯೋಜಿಸಿ, ವಿದ್ಯಾರ್ಥಿಗಳಿಗೆ, ಯುವಕರಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿಗೊಳಿಸುವ ಯತ್ನವೂ ಮಾಡಲಾಗಿದೆ. ಈ ಕಾರ್ಯ ನಿರಂತರವಾಗಿ ಮುಂದುವರಿಸುವ ಸಂಕಲ್ಪ ಯುವಕರದ್ದಾಗಿದೆ.

**ಸಮಾಜಕ್ಕೆ ಸೇವೆ ಮೂಲಕ ಋಣ ತೀರಿಸಬೇಕೆಂಬ ಕಳಕಳಿಯಿಂದ ಸೇವಾ ಕಾರ್ಯದಲ್ಲಿ ತೊಡಗಿದ್ದೇವೆ. ಜನಪ್ರತಿನಿಧಿಗಳು ಸ್ಪಂದಿಸಿದರೆ ಮತ್ತಷ್ಟು ಜ್ಞಾನ ಹಂಚುವ ಕಾರ್ಯಕ್ಕೆ ಸೇವೆ ಸಲ್ಲಿಸುತ್ತೇವೆ.**

**| ಲಿಂಗಯ್ಯಸ್ವಾಮಿ ಶೀಲವಂತರ, ಕಾರಟಗಿ**

ಹತ್ತಾರು ಸಾವಿರ ರೂಪಾಯಿ ವ್ಯಯಿಸಿ, ಕೋಚಿಂಗ್‌ಗೆ ಹೋಗುವ ಪದ್ಧತಿಗೆ ಅಂತ್ಯ ಹಾಡುವುದು ಯುವಕರ ಸಂಕಲ್ಪವಾಗಿದೆ. ನಮಗೆ ಸಮಾನ ಮನಸ್ಕರು ಸಹಾಯ, ಸಹಕಾರ ನೀಡಿದ್ದಾರೆ. ಜನಪ್ರತಿನಿಧಿಗಳು, ಸ್ಥಳೀಯಾಡಳಿತ ಕನಿಷ್ಠ ಸೌಲಭ್ಯ ಒದಗಿಸಲು ಮುಂದಾದರೆ, ಶೈಕ್ಷಣಿಕ, ಉದ್ಯೋಗದ ಕ್ರಾಂತಿ ಮಾಡುವ ಉತ್ಸಾಹ ನಮ್ಮಲ್ಲಿದೆ' ಎನ್ನುತ್ತಾರೆ ಪುಣ್ಯಕೋಟಿ ಗುಂಪಿನ ಲಿಂಗಯ್ಯಸ್ವಾಮಿ ಶೀಲವಂತರ ಹಾಗೂ ಮಂಜುನಾಥಗೌಡ ಹೊನಗುಡಿ.

ಗವಿಸಿದ್ದೇಶ್ವರ ಶ್ರೀಗಳು ಪಟ್ಟಣದಲ್ಲಿ ನಡೆದ ಪ್ರವಚನದಲ್ಲಿ ನಳಂದ ವಿಶ್ವವಿದ್ಯಾಲಯದಗ್ರಂಥಾಲಯದ ಬಗ್ಗೆ ಉಲ್ಲೇಖಿಸಿದ್ದು ನಮಗೆ ಪ್ರೇರಣೆಯಾಯಿತು. ಕೊಪ್ಪಳದ ಮಠಕ್ಕೆ ತೆರಳಿದಾಗ ಶ್ರೀಗಳು ಗ್ರಂಥಾಲಯದ ಮಹತ್ವ ತಿಳಿಸಿ, ತಮ್ಮಲ್ಲಿಯ ಗ್ರಂಥಾಲಯವನ್ನು ತೋರಿಸಿ ಉತ್ತೇಜಿಸಿದ್ದರು. ಇದೇ ಪ್ರೇರಣೆಯಿಂದ ನಮ್ಮಲ್ಲಿ ಗ್ರಂಥಾಲಯ ಆರಂಭಿಸಿದ್ದೇವೆ' ಎಂದು ಅವರು ಹೇಳಿದರು.

# ಸಹಕಾರಿ ಯುನಿಯನ್ ಅಧ್ಯಕ್ಷರಾಗಿ ಮುಲ್ಲಾ, ಉಪಾಧ್ಯಕ್ಷರಾಗಿ ಅಮರಗೊಂಡ ಅವಿರೋಧ ಆಯ್ಕೆ



**ವಿಜಯಪುರ :** ಹಿರಿಯ ಸಹಕಾರಿಗಳಾದ ಸಚಿವ ಶಿವಾನಂದ ಪಾಟೀಲ ಅವರ ಪ್ರಯತ್ನದಿಂದಾಗಿ ಶ್ರೀ ಸಿದ್ಧೇಶ್ವರ ಸಹಕಾರಿ ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆಯಲ್ಲಿ ಎದುರಾಳಿಗಳನ್ನು ಹಳೆಯ ಪೆನಲ್ ಕ್ಲೀನಸ್ವೀಪ್ ಮಾಡಿದ ಬೆನ್ನಲ್ಲೇ ಸಚಿವರ ಪ್ರಯತ್ನದಿಂದಾಗಿ ವಿಜಯಪುರ ಜಿಲ್ಲಾ ಸಹಕಾರಿ ಯುನಿಯನ್ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಅವಿರೋಧ ಆಯ್ಕೆ ನಡೆದಿದೆ.

ವಿಜಯಪುರ ಜಿಲ್ಲಾ ಸಹಕಾರಿ ಯುನಿಯನ್ ನಿ. ಅಧ್ಯಕ್ಷರಾಗಿ ಎಂ.ಸಿ. ಮುಲ್ಲಾ, ಉಪಾಧ್ಯಕ್ಷರಾಗಿ ನಾಗಪ್ಪ ಅಮರಗೊಂಡ ಅವಿರೋಧ ಆಯ್ಕೆಯಾಗಿದ್ದಾರೆ.

ಈಚೆಗೆ ನಡೆದ ಚುನಾವಣೆಯಲ್ಲಿ 2025–30 ರ ಅವಧಿಗೆ ಆಡಳಿತ ಮಂಡಳಿಯ ಚುನಾವಣೆಯಲ್ಲಿ 12 ನಿರ್ದೇಶಕರು ಆಯ್ಕೆ ಆಗಿದ್ದರು. ಓರ್ವ ಪದ ನಿಮಿತ್ತ ನಿರ್ದೇಶಕರು ಸೇರಿ 13 ನಿರ್ದೇಶಕರಿದ್ದಾರೆ.

ಮಂಗಳವಾರ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಿದ್ದು, ಅಧ್ಯಕ್ಷ ಸ್ಥಾನಕ್ಕೆ ಎಂ.ಸಿ. ಮುಲ್ಲಾ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಾಗಪ್ಪ ಅಮರಗೊಂಡ ತಲಾ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು.

ಪ್ರತಿಸ್ಪರ್ಧಿಗಳು ಇಲ್ಲದ ಕಾರಣ ಎಂ.ಸಿ.ಮುಲ್ಲಾ ಹಾಗೂ ನಾಗಪ್ಪ ಅಮರಗೊಂಡ ಅವರು ಅಧ್ಯಕ್ಷ, ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆ ಆಗಿದ್ದಾರೆ.

ನಿರ್ದೇಶಕರಾದ ಸಂಗನಬಸಪ್ಪ ಎಸ್. ತಳೇವಾಡ, ಬಸವರಾಜ ಎಂ. ಕುಂಬಾರ, ಶ್ರೀಮಂತ ಜೆ. ಇಂಡಿ, ಚಂದ್ರಶೇಖರ ಎಸ್ ಪಾಟೀಲ, ಭೀಮರಾಯ ಎಸ್. ಹುಡೇದ, ಶ್ರೀಹರ್ಷಗೌಡ ಎಸ್. ಪಾಟೀಲ,ಕೃಷ್ಣಗೌಡಭೀಮನಗೌಡ ಪಾಟೀಲವಕೀಲರು,ಸುರೇಶಗೌಡ ಬಿರಾದಾರ,ಚಂದ್ರವ್ವಎಸ್.ಮಳ್ಳದ , ವಿಶ್ವನಾಥ ಬಿ. ಪಾಟೀಲ ಹಾಗೂ ಪದ ನಿಮಿತ್ತ ನಿರ್ದೇಶಕಿ ಎಸ್. ಕೆ.ಸೌಭಾಗ್ಯ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಚುನಾವಣಾ ಅಧಿಕಾರಿಯಾಗಿ ಸಹಕಾರಿ ಇಲಾಖೆಯ ಸಹಾಯಕ ನಿರ್ದೇಶಕ ಚೇತನಕುಮಾರ ಭಾವಿಕಟ್ಟಿ ಹಾಗೂ ಸಹಕಾರಿ ಯುನಿಯನ್ ಸಿಇಒ ಕೆ.ಎನ್.ಪಾರಗೊಂಡ ಸಹಾಯಕ ಚುನಾವಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು.

# ತಾಂಬಾ ಪಿಕೆಪಿಎಸ್ ಕಾಂಗ್ರೆಸ್ ತೆಕ್ಕೆಗೆ



**ತಾಂಬಾ :** ಗ್ರಾಮದ ವಿವಿಧೋದ್ದೇಶಗಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಮೇಲುಗೈ ಸಾಧಿಸಿದೆ.

12 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪೆನಲ್ 11 ಸದಸ್ಯರು ಆಯ್ಕೆಯಾಗಿದ್ದಾರೆ ಕೇವಲ ಒಂದು ಸ್ಥಾನಕ್ಕೆ ಬಿಜೆಪಿ ಮುಖಂಡರು ತೃಪ್ತಿ ಪಡಬೇಕಾಗಿದೆ.

ಗೆಲವು ಸಾಧಿಸಿದವರಲ್ಲಿ ಬಾಬುರಾವು ಯಲಗೊಂಡ ಪಾಟೀಲ, ಲಕ್ಷ್ಮಣ ನಂದಪ್ಪ ಹಿರೇಕುರಬರ, ಧರ್ಮಣ್ಣ ನಾಗಪ್ಪ ಮಸಳಿ, ಮೈಬೂಬ ಹುಸೇನಸಾಬ ಮುಲ್ಲಾ, ಅಮೋಘಿ ಸಿದ್ದಪ್ಪ ಕನ್ನಾಳ, ಗುರುಲಿಂಗವ್ವ ಗುರಪ್ಪ ಜೇವುರ, ಭಾರತಿ ಸಂಗಯ್ಯ ಅರೇಕಾರ, ಶಿವಪುತ್ರ ಸಿದ್ದಪ್ಪ ಗಗನಳ್ಳಿ, ಗುರಪ್ಪ ಸಿದ್ದಪ್ಪ ಮದಭಾವಿ, ಗೋಪಾಲ ಹುಚ್ಚಪ್ಪ ಸಿಂಗೆ, ಶಂಕ್ರೆಪ್ಪ ಸಿದ್ದಪ್ಪ ಶಿರಗೂರ, ಮಹಾದೇವಪ್ಪ ರಾಚಪ್ಪ ಗಳೇದ ಪ್ರಮುಖರು.

ಚುನಾವಣಾ ಫಲಿತಾಂಶ ಘೋಷಣೆ ಮಾಡುತ್ತಿದ್ದಂತೆ ವಿಜಯೋತ್ಸವ ಆಚರಿಸಲಾಯಿತು. ಕಾಂಗ್ರೆಸ್ ಮುಖಂಡರಾದ ಅಪ್ಪಣ್ಣ ಕಲ್ಲೂರ, ರಾಚಪ್ಪ ಗಳೇದ, ರವಿಕುಮಾರ ಚವ್ಹಾಣ, ಮಹ್ಮದ ವಾಲಿಕಾರ, ಸಿದ್ದನಗೌಡ ಬೀರಾದಾರ, ಜೆ.ಎಸ್.ಹತ್ತಳ್ಳಿ, ಸಿದಗೊಂಡ ಹಿರೇಕುರಬರ, ಕಾಮೇಶ ಉಕ್ಕಲಿ, ಪರಸು ಬೀಸನಾಳ, ರಾಯಗೊಂಡ ನಾಟೀಕಾರ, ಮಹಾದೇವ ಮೂಲಿಮನಿ, ನಾಗಪ್ಪ ಕುರುಬತಳ್ಳಿ, ಸದು ಗಡ್ಡದ, ಮಾಹಂತೇಶ ಬಡದಾಳ, ಸಿದ್ದಪ್ಪ ಕಿಣಗಿ ಇದ್ದರು.

ನಂತರ ಸಿಂದಗಿ ಶಾಸಕ ಅಶೋಕ ಮನಗೂಳಿ ಅವರಿಗೆ ಭೇಟಿಯಾದರು. ಅವರು ಎಲ್ಲ ಸದಸ್ಯರನ್ನು ಸನ್ಮಾನಿಸಿದರು.

# ನಾಯಿ ಕಡಿತಕ್ಕೆ ನಿರ್ಲಕ್ಷ್ಯ ಬೇಡ: ಎಚ್ಚರಿಕೆ ಇರಲಿ–ತಕ್ಷಣ ಲಸಿಕೆ ಪಡೆದುಕೊಳ್ಳಿ: ಜಿಲ್ಲಾಧಿಕಾರಿ ಡಾ.ಆನಂದ ಕೆ. ಕರೆ

**ವಿಜಯಪುರ :** ನಾಯಿ ಕಡಿತಕ್ಕೊಳಗಾದಲ್ಲಿ ಸಾರ್ವಜನಿಕರು ನಿರ್ಲಕ್ಷ್ಯ ವಹಿಸದೇ ಎಚ್ಚರಿಕೆ ವಹಿಸಿ, ತಕ್ಷಣ ಲಸಿಕೆ ಪಡೆದುಕೊಳ್ಳುವ ಮೂಲಕ ರೇಬಿಸ್ ಬಾರದಂತೆ ತಡೆಗಟ್ಟಬಹುದಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಕರ್ನಾಟಕ ಪಶುವೈದ್ಯಕೀಯ ಸಂಘ ಹಾಗೂ ಜಿಲ್ಲಾ ಘಟಕ ಇವರ ಸಹಯೋಗದಲ್ಲಿ ಮಂಗಳವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ರೇಬಿಸ್ ತಡೆಗಟ್ಟಲು ಮುಂದಾಗೋಣ ನೀವು–ನಾವು ನಮ್ಮ ಸಮಾಜ ಎಂಬ ಘೋಷವಾಕ್ಯದಡಿ 2025–ರ ವಿಶ್ವ ರೇಬಿಸ್ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಜನವರಿಯಿಂದ ಈವರೆಗೆ ಹಲವಾರು ಬೀದಿ ನಾಯಿ ಕಡಿತದ ಪ್ರಕರಣಗಳು ವರದಿಯಾಗಿವೆ. ನಾಯಿ ಕಡಿತಕ್ಕೊಳಗಾದಲ್ಲಿ ಸೂಕ್ತ ಸಮಯದಲ್ಲಿ ಚಿಕಿತ್ಸೆ ಪಡೆಯಬೇಕು. ಜಿಲ್ಲೆಯ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ರೇಬಿಸ್ ನಿರೋಧಕ ಲಸಿಕೆ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಸಾರ್ವಜನಿಕರು ತಮ್ಮ ಸಾಕು ನಾಯಿಗಳಿಗೆ ನಿಯಮಿತವಾಗಿ ರೇಬಿಸ್ ನಿರೋಧಕ ಲಸಿಕೆ ಹಾಕಿಸಬೇಕು ಎಂದು ಅವರು ಹೇಳಿದರು.

ರೇಬಿಸ್ ರೋಗ ನಿಯಂತ್ರಣಕ್ಕಾಗಿ ಬೀದಿ ನಾಯಿಗಳಿಗೆ ಲಸಿಕೆ ಹಾಕುವ ಕಾರ್ಯಕ್ರಮವನ್ನು ಈಗಾಗಲೇ ಮುದ್ದೇಬಿಹಾಳದಲ್ಲಿ ಆರಂಭಿಸಲಾಗಿದೆ. ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯತಿ, ಆರೋಗ್ಯ ಸಂಸ್ಥೆಗಳು ಸೇರಿದಂತೆ ಎಲ್ಲ ಇಲಾಖೆಗಳು ಕೈ ಜೋಡಿಸಿ ನಿಯಂತ್ರಣ–ಕ್ಕೆ ಮುಂದಾಗಬೇಕು. ಪಾಲಿಕೆ ವತಿಯಿಂದ ಬೀದಿ ನಾಯಿಗಳ ಜನನ ನಿಯಂತ್ರಣ ಹಾಗೂ ರೇಬಿಸ್ ನಿರೋಧಕ ಲಸಿಕೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. ಬೀದಿ ನಾಯಿಗಳಿಗೆ ರೇಬಿಸ್ ನಿರೋಧಕ ಲಸಿಕೆ ಹಾಕುವ ಹಾಗೂ ನಿಯಮಾನುಸಾರ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಕೈಗೊಳ್ಳುವ ರೇಬಿಸ್ ನಿಯಂತ್ರಣ–ಕ್ಕಾಗಿ ಎಲ್ಲ ಇಲಾಖೆಗಳು ಕೈ ಜೋಡಿಸಿ, ಲಸಿಕೆ ಹಾಕುವ ಕಾರ್ಯಸೂಚಿಯನ್ನು ಸಿದ್ಧಪಡಿಸಿಕೊಂಡು ಮೈಕ್ರೋ ಪ್ಲ್ಯಾನ್ ಹಾಕಿಕೊಂಡು, ಅಗತ್ಯ ಸಿಬ್ಬಂದಿಯೊಂದಿಗೆ ಲಸಿಕೆ ಕಾರ್ಯಕ್ರಮವನ್ನು ಹಮ್ಮಿಕೊಂಡು ಲಭ್ಯತೆಯನುಸಾರ ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕು ಎಂದು ಅವರು ಹೇಳಿದರು.




ಬೀದಿ ನಾಯಿಗಳಿಗೆ ಈಗಾಗಲೇ ಆಶ್ರಯ ಕೇಂದ್ರವನ್ನು ಬುರಣಾಪುರದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ವಿವಿಧ ಬೀದಿ ನಾಯಿಗಳಿಗೆ ಈ ಕೇಂದ್ರದಲ್ಲಿ ಆಶ್ರಯ ಒದಗಿಸಲಾಗುತ್ತಿದ್ದು, ಪಾಲಿಕೆ ಹಾಗೂ ಪಶು ವೈದ್ಯಕೀಯ ಇಲಾಖೆಗಳು ಜಂಟಿಯಾಗಿ ಈ ಕೇಂದ್ರವನ್ನು ನಿರ್ವಹಿಸಲಿದ್ದಾರೆ. ರೇಬಿಸ್ ರೋಗದ ಕುರಿತು ಗ್ರಾಮೀಣ, ನಗರ ಪ್ರದೇಶ ಸೇರಿದಂತೆ ಶಾಲಾ ಕಾಲೇಜ್ ಗಳಲ್ಲಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ವ್ಯಾಪಕವಾಗಿ ಜಾಗೃತಿ ಮೂಡಿಸಬೇಕು. ಈ ರೋಗದ ಕುರಿತು ಜನರಲ್ಲಿ ತಿಳಿವಳಿಕೆ ಮೂಡಿಸಲು ಆಗಾಗ ಜಾಗೃತಿ ಕಾರ್ಯಕ್ರಮ ಆಯೋಜನೆ ಮಾಡಿ ಜಾಗೃತಿ ಮೂಡಿಸಬೇಕು ಎಂದು ಅವರು ಹೇಳಿದರು.

ಬೆಂಗಳೂರಿನ ಪಶುವೈದ್ಯಕೀಯ ಸಂಘದ ರಾಜ್ಯಾಧ್ಯಕ್ಷ ಡಾ.ಶಿವಶರಣಪ್ಪ ಯಲಗೋಡ ಅವರು ಪ್ರಾಸ್ತಾವಿಕವಾಗಿ ಮಾತನಾಡಿ. ವಿಶ್ವ ರೇಬಿಸ್ ದಿನ ಸೆ.28ರಂದು ಪ್ರತಿ ವರ್ಷ ಆಚರಿಸಲಾಗುತ್ತದೆ.

ಕಳೆದ 18 ವರ್ಷಗಳಿಂದ ಈ ದಿನಾಚರಣೆ ಆಚರಿಸಲಾಗುತ್ತಿದೆ. 2030ರವರೆಗೆ ರೇಬಿಸ್ ಮುಕ್ತ ಮಾಡಲು ಈ ದಿಸೆಯಲ್ಲೂ ನಾವೆಲ್ಲರೂ ಪ್ರಯತ್ನಿಸೋಣ. ಈ ಕುರಿತು ಹೆಚ್ಚೆಚ್ಚು ಜನಜಾಗೃತಿ ಮೂಡಿಸುವ ಕಾರ್ಯಕ್ರಮಗಳು, ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವ ಮೂಲಕ ರೇಬಿಸ್ ಮುಕ್ತ ಮಾಡಲು ಅವರು ಕರೆ ನೀಡಿದರು.

ಸಾಂಕ್ರಾಮಿಕ ವಿಭಾಗದ ಹಿರಿಯ ವಿಜ್ಞಾನಿಗಳಾದ ಡಾ.ಗಂಗಾಧರ ಎನ್.ಎಲ್. ಅವರು, ರೇಬಿಸ್ ಕುರಿತು ಉಪನ್ಯಾಸ ನೀಡಿ–ದರು. ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರೂದ್ದಿನ್ ಸೌದಾಗರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಸಂಪತಕುಮಾರ ಗುಣಾರಿ, ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ.ಎಸ್.ಘೋಣಸಗಿ, ಪಾಲಿಕ್ಲಿನಿಕ್ ಉಪನಿರ್ದೇಶಕ ವಿಠೋಬ ಎನ್. ಆಸಂಗಿಹಾಳ, ಜಿ.ಪಂ.ಲೆಕ್ಕಾಧಿಕಾರಿ ರಾಮಣ್ಣ ಅಥಣಿ, ಪಾಲಿಕೆ ಆರೋಗ್ಯಾಧಿಕಾರಿ ಎಸ್. ಎಲ್.ಲಕ್ಕಣ್ಣವರ, ಜಿಲ್ಲಾಸ್ಪತ್ರೆ ವೈದ್ಯ ಅಚ್ಯುತ್ ಪತ್ತಾರ, ಜಿಲ್ಲೆಯ ತಾಲೂಕು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.







"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State